ಶ್ರೀ ಕೆ. ಪಚ್. ಪಾಟೀಲ್.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ, ಈಗ ಇರತಕ್ಕಂಥ ಪ್ರಶ್ನೆಗೂ ಸಂಬಂಧವಿಲ್ಲ. ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಮೊದಲು ಇದ್ದಂಥ ಸರ್ಕಾರಿ ಆಜ್ಞೆಯನ್ನು ಮಾರ್ಪಾಡು ಮಾಡುವುದಕ್ಕೆ ಕಾರಣ ಏನು ಎಂದು. ಅದಕ್ಕೆ ಕಾರಣ ಕೊಟ್ಟಿದ್ದೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಒಟ್ಟು ಎಷ್ಟು ಮಿತಿ ಇರಬೇಕೆಂದು ಇದೆ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಎಲ್ಲಾ ರಿನರ್ವೇಷನ್ ಸೇರಿ ಒಟ್ಟು 50 ಕ್ಕಿಂತ ಹೆಚ್ಚಾಗಿರಬಾರದು ಎಂದು ದೇವದಾಸ್ ಅವರು ಭಾರತ ಸರ್ಕಾರದವರ ಮೇಲ್ಕಡ್ಡ ಹೂಡಿದ್ದ ಮೊಖದ್ದಮೆಯೊಂದರಲ್ಲಿ ಸುಪ್ರೀಂ ಕೋರ್ಟಿನವರು ತೀರ್ಪು ಕೊಟ್ಟಿದ್ದಾರೆ. ಅದಕ್ಕನುಗುಣವಾಗಿ ಈ ಆರ್ಡರನ್ನು ಅಮೆಂಡ್ ಮಾಡಿದ್ದೇವೆ.

ಶ್ರೀ ಕೆ. ಎಂ. ದೊಡ್ಡಸ್ವಾಮಿನಾಯ್ಡು.—ತಮ್ಮ ಉತ್ತರದಲ್ಲಿ ಎಲ್ಲಾ ಸೇರಿ 50 ಪರ್ಸೆಂಟ ಮೀರಬಾರದು ಎಂದು ಹೇಳಿದಿರಿ. ಷೆಡ್ಯೂಲ್ ಕ್ಯಾಸ್ಟ್‌ಗೆ 15 ಪರ್ಸೆಂಟ್, ಷೆಡ್ಯೂಲ್ ಟ್ರೈಬ್ಸ್‌ಗೆ 3 ಪರ್ಸೆಂಟ್ ಮತ್ತು ಬ್ಯಾಕವರ್ಡ್ ಕ್ಲಾಸ್‌ಗೆ 30 ಪರ್ಸೆಂಟು ಈ ರೀತಿ ರಿನರ್ವೇಷನ್ ಕೊಡತಕ್ಕಂಥ ಕಾಲದಲ್ಲಿ ಯಾವ ನಿಯಮವನ್ನು ಅನುಸರಿಸುತ್ತೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಷೆಡ್ಯೂಲ್ ಕ್ಯಾಸ್ಟ್‌ಗೆ 15 ಪರ್ಸೆಂಟ್, ಷೆಡ್ಯೂಲ್ ಟ್ರೈಬ್ಸ್‌ಗೆ 3 ಪರ್ಸೆಂಟ್ ಕೊಟ್ಟು ಉಳಿದದ್ದು ಬ್ಯಾಕ್‌ವರ್ಡ್ ಕ್ಲಾಸ್‌ಗೆ 30 ಪರ್ಸೆಂಟ್ ರಿನರ್ವೇಷನ್ ಕೊಡಬೇಕು ಎಂದು ಕ್ಯಾಬಿನೆಟ್ ನಿರ್ಣಯ ಮಾಡಿದೆ.

ಶ್ರೀ ಕೆ. ಸಿದ್ದಯ್ಯ.—ಗೌರ್ನಮೆಂಟ್ ಆರ್ಡರ್‌ನಲ್ಲಿ ಈ ರಿಸರ್ವೇಷನ್ ಇಲ್ಲ. ಸುಪ್ರೀಂ ಕೋರ್ಟು ಡಿಸಿಷನ್ ವಿರುದ್ಧವಿರುವುದರಿಂದ ಸುಪ್ರೀಂ ಕೋರ್ಟು ಡಿಸಿಷನ್ ಯಾವ ರೀತಿಯಲ್ಲಿ ವಯಿಲೇಷನ್ ಆಗಿಲ್ಲದೇ ಇರುವುದರಿಂದ ಎಂದರೆ ಅದನ್ನು ಒಪ್ಪಿಕೊಂಡ ಮೇಲೆ ಹಿಂದಿನ 1969ರ ಗೌರ್ನಮೆಂಟ್ ಆರ್ಡರ್‌ನ್ನು ಮತ್ತೆ ಜಾರಿಗೆ ತರುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—1969 ಆರ್ಡರ್ ಮಾಡಿ ಹೇಗೆ ರೀತಿ ಇಪ್ಪೋತ್ತು ದೇಶದಲ್ಲಿ ಜಾರಿಯಲ್ಲಿದೆ.

COMPENSATION FOR THE LAND ACQUIRED IN BHOJ AND OTHER VILLAGES.

322. Sri J. S. AMMANNAVAR (Sadalga).—

Will the Minister for Revenue be pleased to state :—

(*a*) the number of persons whose lands have been acquired from the villages Bhoj, Bedakihal, Shamanewadi, Sadalga, Examba and Borgaon for the newly constructed roads ;

(*b*) the year in which they were acquired ;

(*c*) whether compensation was paid to all of them ;

(*d*) if not, the reasons for not paying the compensation though some of the roads have been completed long back ;

(*e*) whether it is a fact that though the lands have been taken for roads long back the land revenue is being collected on these lands and the payment of compensation is being delayed for number of years ?

Sri N. HUTCHAMASTHY GOWDA (Minister for Revenue).—

(*a*) and (*b*). The following cases are under acquisition ; :

Name of Village	*No. of persons*	*Year of institution*
Bhoj ..	70	1969
Bedakihal ..	63	1969
Shamanewadi ..	Nil	..
Sadalga ..	148	1966
Malikwad ..		and 1970
Examba ..	50	1969
Boragaon ..	61	1969

(*c*) No.

(*d*) The Land Acquisition Proceedings are not yet completed.

(*e*) Yes, it is a fact that land revenue is being collected. Instructions have been issued to all the Deputy Commissioners not to collect the Land Revenue in cases where possession of the land has been taken over pending finalisation of Acquisition Proceedings. As regards delay in payment of compensation, the question does not arise in view of reply to clause (*d*).

ಉತ್ತರದಲ್ಲಿ ಒಂದು ತಿದ್ದುಪಡಿ ಮಾಡಿಕೊಳ್ಳಬೇಕು. 'ಇ' ಪ್ರಶ್ನೆಗೆ ಇಲ್ಲ ಎಂದು ಹೇಳಿದೆ. 85 ಜನಗಳಿಗೆ ಪರಿಹಾರ ದ್ರವ್ಯಕೊಡಲಾಗಿದೆ ಎಂದು ತಿದ್ದುಪಡಿಮಾಡಿಕೊಳ್ಳಬೇಕು

ಶ್ರೀ ಕೆ. ಸಿದ್ದಯ್ಯ.—1966-69 ರಿಂದ ಲ್ಯಾಂಡ್ ಅಕ್ವಿಷನ್ ಪ್ರೊಸಿಡಿಂಗ್ಸ್ ನಡೆದಿದೆ ಅದರಲ್ಲಿ ತಕರಾರುಗಳು ಇತ್ಯರ್ಥವಾಗಲು ಎಷ್ಟುಕಾಲ ಹತ್ತುತ್ತದೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿರ್ದಿಷ್ಟವಾಗಿ ಇಷ್ಟೇ ದಿವಸಗಳಲ್ಲಿ ಕೇಸ್‌ಗಳು ಮುಗಿಯಬೇಕು ಎಂದು ಕಾನೂನು ಇಲ್ಲ. ಆದರೂ ಕೆಲವು ಕೇಸುಗಳು ಅವಾರ್ಡ್ ಸ್ಟೇಜಿಗೆ ಬಂದಿವೆ, ಕೆಲವು ಫೈನಲ್ ನೋಟಿಫಿಕೇಷನ್ ಆಗಿವೆ, ಈ ಪರಿಸ್ಥಿತಿಯಲ್ಲಿವೆ. ಆದಷ್ಟುಬೇಗ ಫೈನಲೈಸ್ ಮಾಡಿಸಿ ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಸಿದ್ದಯ್ಯ.—ಈಗಾಗಲೇ ಲ್ಯಾಂಡ್ ರೆವಿನ್ಯೂ ವಸೂಲು ಮಾಡಿದ್ದಾರೆ ಅದನ್ನು ತಿರುಗಿ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—9-10-72ರಲ್ಲಿ ಡೆಪ್ಯುಟಿ ಕಮಿಷನರ್‌ಗಳಿಗೆ ಒಂದು ಸೂಚನೆ ಕಳುಹಿಸಿದೆ. ಅದರಲ್ಲಿ ಈಗಾಗಲೇ ಕಂದಾಯ ವಸೂಲು ಆಗಿದ್ದರೆ ಅದನ್ನು ರೆವಿಷನ್ ಮಾಡಬೇಕು ಕಂದಾಯ ವಸೂಲು ಮಾಡಕೂಡದು ಎಂದು. ಜಮೀನು ಸ್ವಾಧೀನಕ್ಕೆ ತೆಗೆದು ಕೊಂಡಮೇಲೆ ಪರಿಹಾರ ದ್ರವ್ಯ ಕೊಡುವವರೆಗೂ ಕಂದಾಯ ವಸೂಲು ಮಾಡಿದ್ದನ್ನು ಸಸ್‌ಪೆನ್ಸ್‌ನಲ್ಲಿ ಇರಬೇಕು ವಸೂಲು ಆಗಿದ್ದರೆ ರೆವಿಷನ್ ಕೊಟ್ಟು ವಾಪಸ್ ಕೊಡಬೇಕು ಎಂದು ಡೆಪ್ಯುಟಿ ಕಮಿಷನರ್‌ಗೆ ಸೂಚನೆ ಕೊಟ್ಟಿದೆ. ಮತ್ತೆ ಈ ವಿಷಯವನ್ನು ತಹಸೀಲ್ದಾರ್ ಅವರ ಗಮನಕ್ಕೆ ಲ್ಯಾಂಡ್ ಅಕ್ವಿಷನ್ ಆಫೀಸರ್‌ಗಳು ತರಬೇಕೆಂದು ತಿಳಿಸಿದೆ ಮತ್ತು ಇತರೆ ರೆಂಟಲ್ ಕಾಂಪನ್ಸೇಷನ್ ಕೊಡುವ ಸಂದರ್ಭದಲ್ಲಿ ಕಂದಾಯ ವಸೂಲು ಮಾಡಬೇಕು ಎಂದು ತಿಳಿಸಿದೆ